ದಿನಾಂಕಃ **6.2.2026** ಆರ್ ಎ **18/2025** ಪಿ ಡಬ್ಲೂಃ **1**

## ಸಾಕ್ಷಿಯನ್ನು ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಆರ್ ವಿ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅವುಗಳ ಬಗ್ಗೆ ಮಾಹಿತಿಯನ್ನು ನಾನು ನೀಡಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿರುತ್ತವೆ.

ಪಾಟೀ ಸವಾಲು 1 ನೇ ಎದುರುದಾರರ ಶ್ರೀ ಎನ್ ಎ ಪಿ ವಕೀಲರಿಂದಃ

ನಾನು ವಿದ್ಯಾಭ್ಯಾಸ ಮಾಡಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ನನಗೆ ಸಹಿ ಮಾಡಲು ಮಾತ್ರ ಬರುತ್ತದೆ. ಈ ಅಪೀಲನ್ನು ಯಾರು ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅಪಿಲನ್ನು ಯಾರ ವಿರುದ್ಧ ಹಾಕಿದ್ದಾರೆ ಎಂದು ಗೊತ್ತಿಲ್ಲ. ಸಂಡೂರು ನ್ಯಾಯಲಯದಲ್ಲಿ 1 ನೇ ಎದುರುದಾರರು ನನ್ನ ವಿರುದ್ಧ ಒ ಎಸ್ ನಂಃ 47-2013 ದಾವೆಯನ್ನು ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಗೆ ಗೊತ್ತಿದೆ. ಸದರಿ ದಾವೆಯಲ್ಲಿ ನಾವು ಅಬ್ದುಲ್ ರೆಹಮಾನ್ ಎಂಬ ವಕೀಲರನ್ನು ನೇಮಕ ಮಾಡಿಕೊಂಡಿದ್ದೆವು ಎಂದರೆ ಸಾಕ್ಷಿಯು ಅದರ ಬಗ್ಗೆ ತನಗೆ ಗೊತ್ತಿಲ್ಲ ಎಂದು ಮತ್ತು ಸಂಡೂರು ನ್ಯಾಯಾಲಯದಲ್ಲಿ ನನ್ನನ್ನು ಕರೆದಿದ್ದರು ಎಂದು ಮತ್ತು ನಾನು ನ್ಯಾಯಾಲಯಕ್ಕೆ ಹೋದಾಗ ನನ್ನ ಸಹಿಯನ್ನು ತೆಗೆದುಕೊಂಡಿದ್ದರು ಎಂದು ಮತ್ತು ಅದನ್ನು ಹೊರತು ಪಡಿಸಿ ನನಗೆ ಬೇರೆ ಮಾಹಿತಿ ಇಲ್ಲ ಎಂದು ಹೇಳಿರುತ್ತಾರೆ. ಸಂಡೂರು ನ್ಯಾಯಾಲಯದಲ್ಲಿ ದಿಃ 1-3-2023 ರಂದು ತೀರ್ಪು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಿಃ 1-3-2023 ರಂದು ನಾನು ಸಂಡೂರು ನ್ಯಾಯಾಲಯಕ್ಕೆ ಹೋಗಿದ್ದೆ ಮತ್ತು ಆ ದಿವಸ ಅಬ್ದುಲ್ ರೆಹಮಾನ್ ವಕೀಲರು ನನಗೆ ದಾವೆಯ ತೀರ್ಪು ನಮ್ಮ ವಿರುದ್ಧ ಆಗಿದೆ ಎಂದು ಮತ್ತು ಅದರ ವಿರುದ್ಧ ಅಪೀಲನ್ನು ಕಾಲ ಮಿತಿ ಅವಧಿಯ ಒಳಗೆ ಸಲ್ಲಿಸಬೇಕು ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ದಿಃ 21-3-2023 ರಂದು ಅಬ್ದುಲ್ ರೆಹಮಾನ್ ವಕೀಲರು ತೀರ್ಪಿನ ದೃಢೀಕೃತ ಪ್ರತಿ ಪಡೆಯಲು ಅರ್ಜಿ ಸಲ್ಲಿಸಿದ್ದರು ಮತ್ತು ಅದನ್ನು ಪಡೆದು ನನಗೆ ದಿಃ 25-3-2023 ರಂದು ಕೊಟ್ಟಿದ್ದರು ಎಂದರೆ ಸರಿಯಲ್ಲ. 1 ನೇ ಎದುರುದಾರರು ಸಂಡೂರು ನ್ಯಾಯಾಲಯದಲ್ಲಿ ಇಪಿ ನಂಃ 38-2023 ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ನಗೆ ಗೊತ್ತಿಲ್ಲ. ಸದರಿ ಇಪಿಯ ನೋಟೀಸ್ ನನಗೆ ಬಂದಿತ್ತು ಎಂದರೆ ಸಾಕ್ಷಿಯು ಒಂದು

ಬಾರಿ ಬಂದಿತ್ತು ಎಂದು ಹೇಳಿರುತ್ತಾರೆ. ನೋಟೀಸ್ ಬಂದ ಸಮಯದಲ್ಲಿ ನಾವು ಸಂಡೂರಿನ ಆಗಿನ ಎಂ ಎಲ್ ಎ ತುಕಾರಾಮ್ ರವರನ್ನು ಭೇಟಿ ಮಾಡಿದ್ದೆವು ಮತ್ತು ಅವರು ನಮಗೆ ನೋಟೀಸ್‌ನ್ನು ತೆಗೆದುಕೊಳ್ಳಬೇಡಿ ಎಂದು ಹೇಳಿದ್ದರಿಂದ ನಾವು ಸದರಿ ನೋಟೀಸ್ಸನ್ನು ತೆಗೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ನಾವು ನೋಟೀಸ್‌ನ್ನು ತೆಗೆದುಕೊಳ್ಳಲು ನಿರಾಕರಿಸಿದ್ದರಿಂದ ನ್ಯಾಯಾಲಯಲದಿಂದ ಜಮೀನಿನ ಸ್ವಾಧೀನ ಪಡೆದುಕೊಳ್ಳುವಂತೆ ಆದೇಶ ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಬೇಲೀಫ್ ರವರು ಆಸ್ತಿಯ ಸ್ವಾಧೀನವನ್ನು 1 ನೇ ಎದುರುದಾರರಿಗೆ ನ್ಯಾಯಾಲಯದ ಆದೇಶದಂತೆ ಕೊಡಿಸಲು ಸ್ಥಳಕ್ಕೆ ಬಂದ ಸಮಯದಲ್ಲಿ ನಾವೆಲ್ಲರೂ ಸೇರಿ ಅವರಿಗೆ ಅಡ್ಡ ಪಡಿಸಿದ್ದರಿಂದ ಅವರು ಸ್ವಾಧೀನಗೊಳಿಸದೇ ನ್ಯಾಯಾಲಯಕ್ಕೆ ರಿಪೋರ್ಟ್ ಹಾಕಿದ್ದರು ಎಂದರೆ ಗೊತ್ತಿಲ್ಲ. ಸಂಡೂರು ನ್ಯಾಯಾಲಯದಿಂದ ಬಳ್ಳಾರಿ ಎಸ್‌ಪಿ ಗೆ ನ್ಯಾಯಾಲಯದ ಆದೇಶ ಜಾರಿ ಮಾಡಲು ಬಂದೋಬಸ್ತು ಮಾಡುವಂತೆ ತಿಳಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಪೋಲೀಸರು ನ್ಯಾಯಾಲಯದ ಆದೇಶ ಜಾರಿ ಮಾಡಲು ಅಸಹಕಾರ ತೋರಿಸಿದ್ದರಿಂದ 1 ನೇ ಎದುರುದಾರರು ಬಳ್ಳಾರಿ ಎಸ್ ಪಿ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ ಸಲಿಸಿದ್ದರು ಎಂದರೆ ಗೊತ್ತಿಲ್ಲ. ದಿಃ 17-4-2025 ರಂದು ಎಸ್ ಪಿ ರವರ ವಿಚಾರಣೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ 1 ನೇ ಎದುರುದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಓ ಎಸ್ ನಂಃ 47/2013 ರ ತೀರ್ಪಿನ ವಿರುದ್ಧ ಯಾವುದೇ ಅಪೀಲು ಸಲ್ಲಿಸಿಲ್ಲವೆಂದು ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 23-4-2025 ರಂದು ನಾವು ಈ ಅಪೀಲನ್ನು ಸಲ್ಲಿಸಿದ್ದೇವೆ ಎಂದರೆ ಸರಿ. ನಾನು ಎ ಜಿ ಪಿ ಸಂಡೂರು ರವರು ತೆಗೆದುಕೊಂಡ ತೀರ್ಪಿನ ದೃಢೀಕೃತ ನಕಲನ್ನು ಈ ಅಪೀಲಿನೊಂದಿಗೆ ಸಲ್ಲಿಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ಈ ಅಪೀಲನ್ನು ಸಲ್ಲಿಸಲು ನನ್ನನ್ನು ಸಂಡೂರು ಎಸ್ ಪಿ ಕಚೇರಿಗೆ ಕರೆಸಿದ್ದರು ಮತ್ತು ಅಲ್ಲಿಯೇ ನನ್ನ ಸಹಿಗಳನ್ನು ಅಪೀಲಿನ ಎಲ್ಲಾ ದಾಖಲೆಗಳಲ್ಲಿ ಪಡೆದುಕೊಂಡಿದ್ದರು ಮತ್ತು ಅಪೀಲನ್ನು ಸಲ್ಲಿಸಲು ವ್ಯವಸ್ಥೆಯನ್ನು ಪೋಲೀಸರೇ ಮಾಡಿದ್ದರು ಎಂದರೆ ಸರಿಯಲ್ಲ. ಓ ಎಸ್ 47/20213 ರ ತೀರ್ಪು ಯಾವ ದಿವಸ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಈ ಅಪೀಲು ಸಲ್ಲಿಸಲು ಎಷ್ಟು ದಿವಸ ಕಾಲ ವಿಳಂಬ ಆಗಿದೆ ಎಂದು ನನಗೆ ಗೊತ್ತಿಲ್ಲ. ಅಪೀಲು ಸಲ್ಲಿಸಲು ಕಾಲ ವಿಳಂಬ ಯಾವ ಕಾರಣದಿಂದ ಆಗಿದೆ ಎಂದು ನನ್ನ ಅರ್ಜಿಯಲ್ಲಿ ಹೇಳಿದ್ದೇನೆ ಎಂದು ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಸಂಡೂರು ಆಗಿನ ಎಂ ಎಲ್ ಎ ರವರ ಮಾತನ್ನು ಕೇಳಿಕೊಂಡು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ಮತ್ತು ನಮಗೆ ಮನೆ ಬೇಕು ಎಂದು ಕೇಸು ಹಾಕಿದ್ದೇವೆ ಎಂದು ಹೇಳಿರುತ್ತಾರೆ.

ನನ್ನ ತಾಯಿಯ ಹೆಸರು ಮೂದಿನಮ್ಮ. ಆಕೆ ಸುಮಾರು 10 ವರ್ಷದ ಹಿಂದೆ ಮರಣ ಹೊಂದಿದ್ದಳು. ಮರಣ ಪ್ರಮಾಣ ಪತ್ರವನ್ನು ನಾನು ಹಾಜರುಪಡಿಸಿದ್ದೇನೆ. ಸದರಿ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನದು ತೋರಣಗಲ್ಲಿನಲ್ಲಿ ತರಕಾರಿ ಮಾರುವ ಅಂಗಡಿ ಇದೆ ಎಂದರೆ ಸರಿ. ನನಗೆ ತಿಂಗಳಿಗೆ ರೂ. 30 ಸಾವಿರ ಆದಾಯ ಇದೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಮೂರು ಜನ ಗಂಡು ಮಕ್ಕಳು ಎಂದರೆ ಸಾಕ್ಷಿಯು 5 ಜನ ಎಂದು ತಿಳಿಸಿರುತ್ತಾರೆ. ನನ್ನ ಮೂರು ಜನ ತಮ್ಮಂದಿರು ಆಟೋ ಇಟ್ಟುಕೊಂಡು ಚಲಾಯಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಒಬ್ಬ ಮಾತ್ರ ಆಟೋ ಇಟ್ಟುಕೊಂಡಿದ್ದಾನೆ ಎಂದು ಹೇಳಿರುತ್ತಾರೆ. ಆದರಿಂದ ತಿಂಗಳಿಗೆ ರೂ. 20 ಸಾವಿರ ಆದಾಯ ಇದೆ ಎಂದು ಹೇಳಿರುತ್ತಾರೆ. ನಾನು ಅಪೀಲು ಸಲ್ಲಿಸಲು ಆರಿರುವ ಕಾಲ ವಿಳಂಬವನ್ನು ಮನ್ನಾ ಮಾಡಲು ಯಾವುದೇ ಸಕಾರಣಗಳನ್ನು ಕೊಟ್ಟಿಲ್ಲದೇ ಇರುವ ಕಾರಣ ನಾನು ನನ್ನ ಅರ್ಜಿ ವಜಾ ಗೊಳ್ಳಬೇಕಾಗುತ್ತದೆ ಎಂದರೆ ಸರಿಯಲ್ಲ. 1 ನೇ ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಪೋಲೀಸರ ಮತ್ತು ಎಂ ಎಲ್ ಎ ರವರ ಮಾತನ್ನು ಕೇಳಿಕೊಂಡು ನಾನು ಯಾವುದೇ ಸಕಾರಣ ವಿಲ್ಲದೆ ಕಾಲ ವಿಳಂಬ ಮಾಡಿ ಸುಳ್ಳು ಅಪೀಲನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆದರಂತೆ ಸುಳ್ಳು ಸಂಗತಿಗಳಿಂದ ಕೂಡಿದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**